Ref.No. 72/2023

MW–1,

ದಿನಾಂಕಃ 18–02–2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ– 1 ನೇ ಪಾರ್ಟಿ ಪರವಾಗಿಃ ಶ್ರೀ. ಹೆಚ್ ಎನ್ ವಕೀಲರಿಂದಃ

1 ನೇ ಪಾರ್ಟಿಯವರು 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಸುಮಾರು 7 ವರ್ಷಗಳ ಕಾಲ ಅಂದರೆ ಅಕ್ಟೋಬರ್ 2014 ರಿಂದ ಡಿಸೆಂಬರ್ 2021 ರವರೆಗೆ ಕೆಲಸ ಮಾಡಿರುತ್ತಾರೆ . 2014 ರಲ್ಲಿ 1 ನೇ ಪಾರ್ಟಿಯವರಿಗೆ Appointment order ನೀಡುವ ಮೊದಲು ಅವರು ನಮ್ಮ ಸಂಸ್ಥೆಯಲ್ಲಿ ಕಾಂಟ್ರಾಕ್ಟ್ ಲೇಬರ್ ಆಗಿ ಕೆಲಸ ಮಾಡಿರುತ್ತಾರೆ. ಕರ್ನಾಟಕದಲ್ಲಿ 2 ನೇ ಪಾರ್ಟಿ ಸಂಸ್ಥೆ ಯ 7 ರಿಂದ 8 Branch ಗಳು ಇರುತ್ತವೆ. ಮೈಸೂರು ಮತ್ತು ಚಾಮರಾಜನಗರದಲ್ಲಿಯೂ ಕೂಡ 2 ನೇ ಪಾರ್ಟಿ ಸಂಸ್ಥೆ ಯ Branch ಗಳು ಇರುತ್ತವೆ ಎಂದರೆ ಸರಿ . 1 ನೇ ಪಾರ್ಟಿಯವರು ಮೈಸೂರು, ಚಾಮರಾಜನಗರ, ಬಿಜಾಪುರ, ಇಂದೂಪುರ್ –ಆಂಧ್ರಪ್ರದೇಶ, ಸಾತೂರು – ತಮಿಳುನಾಡುಗಳಲ್ಲಿ ಕೆಲಸ ಮಾಡಿರುತ್ತಾರೆ. 1 ನೇ ಪಾರ್ಟಿಯವರು ಪ್ರತಿಯೊಂದು ಬ್ರಾಂಚ್ ನಲ್ಲಿ ಇತ್ತಿಷ್ಟು ವರ್ಷ ಕೆಲಸ ಮಾಡಬೇಕಾಗಿಲ್ಲ, ಅವರ ಕೆಲಸ maintenance ವ್ಯಾಪ್ತಿಗೆ ಬರುವುದರಿಂದ ಅವರು ನೀಡ್ ಬೇಸ್ ನ ಮೇಲೆ 2 ನೇ ಪಾರ್ಟಿ ಸಂಸ್ಥೆ ಯ ಬ್ರಾಂಚ್ ಗಳಿಗೆ ಹೋಗಿ ಕೆಲಸ ಮಾಡುತ್ತಿದ್ದರು . 1 ನೇ ಪಾರ್ಟಿಯವರಿಗೆ ಟ್ರಾನ್ಸ್ ಪರ್ ಆರ್ಡರ್ ಅನ್ನು ರಿಜಿಸ್ಟರ್ ಪೋಸ್ಟ್ ಮೂಲಕ 06.04.2022 ರಂದು ಕಳಿಸಿರುತ್ತೇವೆ. 1 ನೇ ಪಾರ್ಟಿಯವರಿಗೆ ಸದರಿ ಆದೇಶವು ಯಾವಾಗ ಜಾರಿ ಆಗಿರುತ್ತದೆ ಎಂದು ನಾನು ದಾಖಲಾತಿಗಳನ್ನು ನೋಡಿ ಹೇಳಬೇಕಾಗುತ್ತದೆ.

1 ನೇ ಪಾರ್ಟಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.